ಕಂಡಿರದ ನಾಗಕ್ಕನನ್ನು ಮನಸ್ಸಿನಲ್ಲಿಯೇ ಕಲ್ಪಿಸಿಕೊಂಡು ಕುಳಿತಲ್ಲೇ ಕೈ ಮುಗಿಯುತ್ತಿದ್ದಳು.

ಅದೊಂದು ದಿನ ಮಟಮಟ ಮಧ್ಯಾಹ್ನ ಮನೆ ಮುಂದಿನ ಜಗಲಿಯಲ್ಲಿ ಅಜ್ಜಿ ಎಲೆ ಅಡಿಕೆ ಕುಟ್ಟುತ್ತಿದ್ದಳು. ಮನೆಯ ಅಂಗಳದಾಚೆ ರಸ್ತೆಯಲ್ಲಿ ಕಾರೊಂದು ಬಂದು ನಿಂತಿತು. ಕಣ್ಣುಕುಕ್ಕುವ ಬಿಸಿಲಿದ್ದಿದ್ದರಿಂದ ಅಜ್ಜಿಗೆ ಬಂದವರಾರೆಂದು ಸ್ಪಷ್ಟವಾಗಿ ಕಾಣಿಸಲಿಲ್ಲ. ಹಿಂದಿನ ಮನೆಯ ಜಮಾಲ್ ಸಾಹೇಬರ ಮಗ ದುಬೈನಿಂದ ಬರಲಿಕ್ಕಿದ್ದ. ಅವನೇ ಬಂದಿರಬೇಕು ಎಂದುಕೊಳ್ಳುತ್ತಾ ಮೆಲ್ಲನೆ ತನ್ನ ಮನೆಯ ಒಳಗೆ ಇಣುಕಿತು. ಇತರ ದಿನಗಳಲ್ಲಿ, ತನಗೆ ರಾತ್ರಿಯಲ್ಲೂ ಬಾರದ ನಿದ್ದೆ, ಸೊಸೆಯರನ್ನು ಮಧ್ಯಾಹ್ನವೂ ಆವರಿಸಿಕೊಳ್ಳುವುದನ್ನು ಕಂಡು ಕರುಬುವ ಮುದುಕಿ, ಮೊದಲ ಬಾರಿಗೆ ಸೊಸೆಯರು ನಿದ್ದೆಯಲ್ಲಿ ಮುಳುಗಿರುವುದನ್ನು ನೋಡಿ ಖುಷಿಪಟ್ಟಿತು. ಆಸೀಫ ಕಾರಿನಿಂದ ಇಳಿದ ಕೂಡಲೇ, 'ಈ ಸಾರಿ ಸೊಸೆಯರಿಗೆ ಕಾಣದ ಹಾಗೆ ಸ್ವಲ್ಪ ಖರ್ಜೂರ ಜಾಸ್ತಿ ಕೊಡು ಮಾರಾಯ. ಆ ರಾಕ್ಷಸಿಯರು ಪ್ರತೀ ಸಾರಿ ನೀನು ಕೊಟ್ಟದರಲ್ಲಿ ಹೆಚ್ಚು ಪಾಲು ತಮ್ಮ ಮಕ್ಕಳಿಗಿಟ್ಟುಕೊಳ್ಳುತ್ತಾರೆ; ನನಗೇನೂ ಗಿಟ್ಟುವುದಿಲ್ಲ ಎನ್ನಬೇಕು' ಎಂದುಕೊಳ್ಳುತ್ತಿರುವಾಗ, ಕಾರಿನ ಹಿಂದಿನ ಬಾಗಿಲು ತೆರೆದುಕೊಂಡಿತು. ಅಜ್ಜಿಗೆ ಮೊದಲು ಕಂಡಿದ್ದು, ಚಿನ್ನದ ಬಣ್ಣದ ಚಪ್ಪಲಿ ತೊಟ್ಟಿದ್ದ ಕರಿ ಕಾಲುಗಳು.

"ಇಸ್ಸಿ, ಜಮಾಲ್ ಸಾಹೇಬರ ಸೊಸೆ ಇಷ್ಟು ಕಪ್ಪಾದ್ದು ಯಾವಾಗ, ಬಹುಶಃ ದುಬೈ ಬಿಸಿಲಿಗೆ ಇರಬೇಕು. ಎಂತದಾದ್ರು ಇರಲಿ, ಅವರು ಮನೆಗೆ ಹೋಗುವ ಮೊದಲು ಖರ್ಜೂರದ ವಿಷಯ ಕಿವಿಗೆ ಹಾಕಬೇಕು" ಎಂದು ತನ್ನಷ್ಟಕ್ಕೆ ಹೇಳಿಕೊಳ್ಳುತ್ತಾ ಅವಸರದಿಂದ ಅಂಗಳಕ್ಕಿಳಿಯಿತು ಅಜ್ಜಿ. ಕಾರಿನ ಬಾಗಿಲು ಪೂರ್ತಿಯಾಗಿ ತೆರೆದುಕೊಂಡಾಗ ಇಳಿದ ಹೆಂಗಸು ಬುರ್ಖಾ ತೊಟ್ಟಿರಲಿಲ್ಲ. ಅಚ್ಚರಿಯಿಂದ ಅಜ್ಜಿ ನಿಂತಲ್ಲೇ ನಿಂತುಬಿಟ್ಟಿತು. ಸೀದಾ ಗೇಟು ತೆಗೆದು ಒಳಗೆ ಬಂದ ಕೆಂಪು ಜರತಾರಿ ಸೀರೆಯ ಕರಿ ಹೆಂಗಸು ತನ್ನ ಹತ್ತಿರಕ್ಕೆ ಬಂದು ನಿಂತಾಗ, ಆಕೆಯ ಕತ್ತಲಿದ್ದ ನಾಲ್ಕು ಎಳೆಯ ಅವಲಕ್ಕಿ ಸರ ಅಜ್ಜಿಯ ಕಣ್ಣು ಕುಕ್ಕಿತು.

"ಏನಜ್ಜಿ, ಗುರ್ತ ಆಗಲಿಲ್ಲವಾ?" ಎಂದು ಹೇಳಿ ತಲೆ ತುರಿಸಿಕೊಂಡಾಗ, ಅಜ್ಜಿಯ ಗಮನವೆಲ್ಲಾ

